ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ತುಮಕೂರು

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ತಾಲ್ಲೂಕು

ಸಂಖ್ಯೆ:ಅ6.ಅನು.ಪ್ರಾ.ಶಾ.ಮಾ.ನವೀ-43/2020-21 ದಿನಾಂಕ:11-08-2020

## ನಮೂನೆ 5

## (ಕರ್ನಾಟಕ ಶಿಕ್ಷಣ ಕಾಯಿದೆ 83 ನಿಯಮ 9)

## ಕರ್ನಾಟಕ ಶಿಕ್ಷಣ ಕಾಯಿದೆ ಜಾರಿಗೆ ಬಂದಾಗ ಅಸ್ಥಿತ್ವದಲ್ಲಿದ್ದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ತಾತ್ಕಾಲಿಕ ಮಾನ್ಯತೆ ಪ್ರಮಾಣ ಪತ್ರ

ನೆಕ್ಸಿಜನ್ ಎಜುಕೇಷನ್ ಟ್ರಸ್ಟ್(ರಿ) ಹೈದರಾಬಾದ್ ಈ ಆಡಳಿತ ಮಂಡಳಿಯವರು ನಡೆಸುತ್ತಿರುವ ಶ್ರೀ ಚೈತನ್ಯ ಟೆಕ್ನೋ ಸ್ಕೂಲ್ ಶ್ರೀ ಸಾಯಿಬಾಬಾ ದೇವಸ್ಥಾನದ ರಸ್ತೆ, ತಮ್ಮಯ್ಯ ಆಸ್ಪತ್ರೆ ಹತ್ತಿರ, ಟೂಡಾ ಕಛೇರಿ ಎದಿರು, ಆದರ್ಶನಗರ ತುಮಕೂರು ಶಾಲೆಗೆ ದಿನಾಂಕ10-07-2020 ರಂದು ಭೇಟಿನೀಡಿ ಪರಿಶೀಲಿಸಿ ಕರ್ನಾಟಕ ಶಿಕ್ಷಣ ಕಾಯಿದೆ ನಿಯಮ 36-6(ಬಿ)ಯಂತೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆಗಳಿಗೆ ಒಳಪಟ್ಟೆ ಶಾಶ್ವತ ಅನುದಾನರಹಿತವಾಗಿ ತಾತ್ಕಾಲಿಕವಾಗಿ ಈ ಕೆಳಕಂಡಂತೆ ಮಾನ್ಯತೆಯನ್ನು ನೀಡಿದೆ.

| ಕ್ರ. ಸಂ. | ಶಾಲೆಯ ಹೆಸರು | ಮಾನ್ಯತೆ / ನವೀಕರಣದ ಸಾಲು | ವಿವರಗಳು | ಮಾಧ್ಯಮ | ಶಾಲೆಯು ಯಾವ ವರ್ಗಕ್ಕೆ ಸೇರಿದೆ |
|---|---|---|---|---|---|
| 1 | ಶ್ರೀ ಚೈತನ್ಯ ಟೆಕ್ನೋ ಸ್ಕೂಲ್ ಶ್ರೀ ಸಾಯಿಬಾಬಾ ದೇವಸ್ಥಾನದ ರಸ್ತೆ, ತಮ್ಮಯ್ಯ ಆಸ್ಪತ್ರೆ ಹತ್ತಿರ, ಟೂಡಾ ಕಛೇರಿ ಎದಿರು, ಆದರ್ಶನಗರ ತುಮಕೂರು | 2020-21 ರಿಂದ 2022-23 | 1 ರಿಂದ 8 ನೇ ತರಗತಿಗೆ ಮಾನ್ಯತೆ ನವೀಕರಣ (ತಲಾ ಒಂದು ವಿಭಾಗದಂತೆ) | ಆಂಗ್ಲ | ಸಾಮಾನ್ಯ |

ಷರತ್ತುಗಳು:-

1) ಕರ್ನಾಟಕ ಶಿಕ್ಷಣ ಸಂಹಿತೆ ಮತ್ತು ಅನುದಾನ ಸಂಹಿತೆ ಎಲ್ಲಾ ನಿಯಮಗಳನ್ನು ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು
2) ಸರ್ಕಾರಿ ಆದೇಶ ಸಂಖ್ಯೆ ಇಡಿ 59 ವಿವಿಧ 99 ದಿನಾಂಕ:02-02-2000 ರಂತೆ ಶಾಲೆಯ ಸಿಬ್ಬಂದಿ ರಚೆನೆ ನಿರ್ವಹಿಸಬೇಕು.
3) ಶಾಲೆಗೆ ಮಕ್ಕಳ ದ್ದಾಖಲಾತಿಗನುಗುಣವಾಗಿ ಅಗತ್ಯವಾದ ಪೀಠೋಪಕರಣ, ಪಾಠೋಪಕರಣ ಹಾಗೂ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಬೇಕು
4) ಶಾಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಇಡಿ 59 ವಿವಿಧ ದಿನಾಂಕ:02-02-2000 ರ ಅನುಚ್ಛೇದ 4 ರ ನಿಯಮದ 3 ರಂತೆ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಇರುವಂತೆ ಪಾಲಿಸುವುದು
5) ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರು ಪಡಿಸಬೇಕು
6) ಇಲಾಖೆ ಪೂರ್ವಾನುಮತಿ ಪಡೆಯದೇ ಹೆಚ್ಚಿನ ವಿಭಾಗಗಳನ್ನು ತೆರೆಯಬಾರದು
7) ಹಿಂದಿನ ಸಾಲಿನವರೆಗೆ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿದ ಸ್ವೀಕೃತಿ ಹಾಗೂ

ನೋಂದಣಾಧಿಕಾರಿಗಳಿಂದ ಅನುಮೋದಿತ ಆಡಳಿತ ಮಂಡಳಿಯ ಸದಸ್ಯರ ಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸುವುದು

8) ಕರ್ನಾಟಕ ಶಿಕ್ಷಣ ಸಂಹಿತೆ ನಿಯಮಗಳಂತೆ ಸ್ಥಿರನಿಧಿ ಇಡಬೇಕು

9) ಇಲಾಖೆ ನಿರ್ದರಿಸಲ್ಪಟ್ಟ ಪಠ್ಯ ಕ್ರಮದ ಪುಸ್ತಕಗಳನ್ನೇ ಬಳಸಿ ಬೋದಿಸಬೇಕು ಹಾಗೂ ಅನುಮತಿ ನೀಡಿದ ಮಾಧ್ಯಮದಲ್ಲೇ ಭೋದಿಸಬೇಕು

10) ಒಂದು ವೇಳೆ ಆಡಳಿತ ಮಂಡಳಿ ವಿದ್ಯಾರ್ಹತೆ ಹೊಂದಿದ ಶಿಕ್ಷರನ್ನು ನೇಮಿಸದೇ ಮಕ್ಕಳ ಕಲಿಕೆಗೆ ವಂಚನೆಯಾದರೆ ಮಾನ್ಯತೆ ರದ್ದುಪಡಿಸಲಾವುದು

11) ಶಾಲೆಯಲ್ಲಿ ಬಾಲಕ/ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಒದಗಿಸುವುದು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ವಿದ್ಯಾರ್ಥಿ ಕ್ಷೇಮಾಭಿವೃದ್ದಿ ನಿಧಿಗಳನ್ನು ಪಾವತಿಸಿರುವ ಬಗ್ಗೆ ದಾಖಲೆ ನಿರ್ವಹಿಸುವುದು

12) ಅಗ್ನಿ ಸುರಕ್ಷತಾ ಸಾಧನವನ್ನು ಶಾಲೆಯಲ್ಲಿಟ್ಟು ಮಕ್ಕಳ ಸುರಕ್ಷತೆಗೆ ಗಮನಕೊಡುವುದು

13) ಶಾಲೆಯ ಮೇಲಿನ ಮಜಲುಗಳಿಗೆ ಹೋಗಬೇಕಾದ ಮೆಟ್ಟಿಲುಗಳು ಕಿರಿದು ಆಗಿರಬಾರದು ಒಂದು ವೇಳೆ ಪ್ರತಿ ಮಜಲುಗಳಲ್ಲಿ ಸುರಕ್ಷಿತ ಗೋಡೆಗಳನ್ನು ನಿರ್ಮಿಸದಿದ್ದಲ್ಲಿ ಅಥವಾ ತುಂಬಾ ಚಿಕ್ಕದಾದ ಗೋಡೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಈ ಬಗ್ಗೆ ಅತ್ಯಂತ ಜರೂರು ಕ್ರಮ ಕೈಗೊಳ್ಳಬೇಕು ಕೊನೆಯ ಪಕ್ಷ 5 ಅಡಿ ತಡೆಗೋಡೆಗಳು ಇರುವಂತೆ ನೋಡಿಕೊಳ್ಳಬೇಕು , ಗಾಳಿ. ಬೆಳಕಿಗೆ ಅಡಚಣೆಯಾಗದಂತೆ ಗ್ರಿಲ್ ಗಳನ್ನು ಅಳವಡಿಸಬೇಕು

14) ಪಾಠಬೋದನೆಗೆ ಅಗತ್ಯ ಆರ್.ಟಿ.ಇ.ನಿಯಮದಂತೆ ಅಗತ್ಯ ಪ್ರಮಾಣದಲ್ಲಿ ಅಗತ್ಯ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಸಿಬ್ಬಂದಿ ಮಾದರಿ ರಚನೆಯಂತೆ ನೇಮಕ ಮಾಡಿಕೊಳ್ಳುವುದು ಹಾಗೂ ನೇಮಕಾತಿ ಮಾಡಿಕೊಂಡ ನೌಕರರಿಗೆ ಸೇವಾ ಭದ್ರತೆ ಒದಗಿಸುವುದು

15) ಶಾಲಾ ಪ್ರಾರ್ಥನೆ ಮುಗಿದ ನಂತರ ಮಕ್ಕಳು ಶಾಲಾ ಕೊಠಡಿಗೆ ಹೋಗುವಾಗ ನೂಕುನುಗ್ಗಲು ಇರದಂತೆ ವ್ಯವಸ್ಥೆ ಇರಬೇಕು ಮತ್ತು ಶಾಲೆಬಿಟ್ಟ ನಂತರ ರಸ್ತೆ ದಾಟುವ ಸಂದರ್ಭಗಳು ಇದ್ದಲ್ಲಿ ಶಿಕ್ಷಕರಾಗಲಿ ಅಥವಾ ಆಡಳಿತ ಮಂಡಳಿ ಸೆಕ್ಯೂರಿಟಿಯಾಗಲಿ ಕಡ್ಡಾವಾಗಿ ಹಾಜರಿರುವಂತೆ ಕ್ರಮವಹಿಸುವುದು

16) ದಾಖಲಾತಿ/ಹಾಜರಾತಿ ಮನ್ನಾ ಮಾಡಲು ಒಂದು ಭಾರಿ ಮಾತ್ರ ಅವಕಾಶವಿರುತ್ತದೆ.ದಾಖಲಾತಿ ಹೆಚ್ಚಿಸಿಕೊಳ್ಳದೆ ಇದ್ದಲ್ಲಿ ಮುಂದಿನ ಸಾಲಿನಿಂದ ಮಾನ್ಯತೆ ಹಿಂಪಡೆಯಲಾಗುವುದು.

17) ಶಾಲಾ ಮಕ್ಕಳಿಗೆ ದೈಹಿಕ ದಂಡನೆಯನ್ನು ನೀಡಬಾರದು

18) ಮಕ್ಕಳ ಕಡ್ಡಾಯ ಶಿಕ್ಷಣ ಕಾಯಿದೆ-2009 ಹಾಗೂ ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮಗಳು, 2012(ದಿನಾಂಕ:28-04-2012) ರ ಅಧಿಸೂಚನೆಯಂತೆ ಎಲ್ಲಾ ನಿಯಮಗಳನ್ನು ಅನುದಾನ ರಹಿತ ಶಾಲೆಗಳು ಕಡ್ಡಾಯವಾಗಿ ಪಾಲಿಸುವುದು

19) ಕಾಲಕಾಲಕ್ಕೆ ಇಲಾಖೆಯಿಂದ ಹೊರಡಿಸುವ ಆದೇಶಗಳಿಗೆ ಬದ್ದರಾಗಿರತಕ್ಕದ್ದು

20) ಸರ್ಕಾರದ ಆದೇಶ ಸಂಖ್ಯೆ:ಇಡಿ709ಪಿಜಿಸಿ2017, ಬೆಂಗಳೂರು ದಿನಾಂಕ07-03-2018 ರಲ್ಲಿನ ಷರತ್ತಿಗೆ ಒಳಪಟ್ಟಿದೆ

ಕ್ಷೇತ್ರ ಶಿಕ್ಷಣಾಧಿಕಾರಿಗಳು,
ತುಮಕೂರು ತಾಲ್ಲೂಕು.

ಗೆ,

1) ಕಾರ್ಯದರ್ಶಿಗಳು ನೆಕ್ಸಿಜನ್ ಎಜುಕೇಷನ್ ಟ್ರಸ್ಟ್(ರಿ) ಹೈದರಾಬಾದ್

2) ಕಛೇರಿ ಪ್ರತಿ